# 'ಶ್ರೀರಾಮಕೃಷ್ಣ ವಚನವೇದ' ಭಾವಧಾರೆ - 12

ಸ್ವಾಮಿ ನಿತ್ಯಸ್ಥಾನಂದ

## ೩ನೇ ಅಧ್ಯಾಯ

## ವಿದ್ಯಾಸಾಗರನೊಡನೆ ಭೇಟಿ

ಈಶ್ವರಚಂದ್ರ ವಿದ್ಯಾಸಾಗರನು ಬಂಗಾಳದ ಅತ್ಯಂತ ಖ್ಯಾತ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದ. ಮಹಾಪಂಡಿತ, ಹೆಸರಿಗೆ ತಕ್ಕಂತೆ ವಿದ್ಯಾಸಾಗರನೇ ಆಗಿದ್ದ. ಶ್ರೇಷ್ಠ ಬರಹಗಾರನೂ ಕೂಡ. ಆದರೆ ಒಣಪಂಡಿತನಲ್ಲ, ತುಂಬ ಉದಾರಿ. ದಾನ ಧರ್ಮದಲ್ಲಿ ಎತ್ತಿದ ಕೈ. ಅವರ ಸಂಪತ್ತೆಲ್ಲ ದಾನಕೋಸ್ಕರವೇ ಮೀಸಲಾಗಿತ್ತು. ಇದನ್ನು ನೆನಪಿಸಿಕೊಂಡಾಗ ಒಂದು ಸುಭಾಷಿತ ಶ್ಲೋಕ ನೆನಪಿಗೆ ಬರುತ್ತದೆ:

**ಉಭಯೋರ್ನಾಸ್ತಿ ಭೋಗೇಚ್ಛಾ ಪರಾರ್ಥಂ ಧನಸಂಚಯಃ ।**
**ಕೃಪಣೋದಾರಯೋಃ ಪಶ್ಯ ತಥಾಪಿ ಮಹದಂತರಮ್ ॥**

''ಕೃಪಣ ಮತ್ತು ಉದಾರಿ ಇವರಿಬ್ಬರಲ್ಲೂ ಭೋಗೇಚ್ಛೆ ಇಲ್ಲ. ಅವರು ಧನಸಂಚಯ ಮಾಡುವುದು ಇತರರಿಗೋಸ್ಕರ. ಆದರೂ ಅವರಿಬ್ಬರಲ್ಲೂ ಎಷ್ಟೊಂದು ಅಂತರ!''

ಆತ ಅನೇಕ ವಿದ್ಯಾಕೇಂದ್ರಗಳನ್ನು ತೆರೆದು ಅನೇಕರಿಗೆ ಶಿಕ್ಷಣ ತಲುಪುವಂತೆ ಮಾಡಿದ ಮಹನೀಯ. ವಿವಿಧ ಸಮಾಜ ಸುಧಾರಣೆಯ ಕಾರ್ಯದಲ್ಲಿಯೂ ತನ್ನನ್ನು ತೊಡಗಿಸಿಕೊಂಡು ಸಮಾಜದಲ್ಲಿ ಒಂದು ಪ್ರತಿಷ್ಠಿತ ವ್ಯಕ್ತಿಯಾಗಿ ಮೆರೆದವನು. ಆದರೂ ಆತನ ಸರಳತೆ ಅವನ ವ್ಯಕ್ತಿತ್ವಕ್ಕೆ ವಿಶೇಷ ಶೋಭೆಯನ್ನು ನೀಡಿತ್ತು.

### ಶ್ರೀರಾಮಕೃಷ್ಣರ ವ್ಯಕ್ತಿಚಿತ್ರ

ಶ್ರೀರಾಮಕೃಷ್ಣರಿಗೆ ಪ್ರಸಿದ್ಧರೂ ಸತ್ಪುರುಷರೂ ಆದ ವ್ಯಕ್ತಿಗಳನ್ನು ನೋಡುವ ತವಕ. ವಿದ್ಯಾಸಾಗರನ ವಿಚಾರವನ್ನು ಕೇಳಿ ತಿಳಿದುಕೊಂಡಿದ್ದ ಅವರು ಮಾಸ್ಟರ್ ಮಹಾಶಯನನ್ನು('ಮ') ತನ್ನನ್ನು ಅವನೆಡೆಗೆ ಕರೆದುಕೊಂಡು ಹೋಗಲು ಹೇಳಿದರು. 'ಮ' ಈ ವಿಷಯಯವನ್ನು ವಿದ್ಯಾಸಾಗರನಿಗೆ ತಿಳಿಸಿದಾಗ ಅವನು ಅವರನ್ನು ಬರಮಾಡಿಕೊಳ್ಳಲು ಸಂತೋಷದಿಂದ ಒಪ್ಪಿ ಕೇಳಿದ, ''ಅವರು ಎಂತಹ ಪರಮಹಂಸರು? ಕಾವಿಬಟ್ಟೆ ತೊಡುತ್ತಾರೆಯೆ?'' ಎಂದು. ಈಗ 'ಮ' ಶ್ರೀರಾಮಕೃಷ್ಣರ ಒಂದು ಸುಂದರ ವ್ಯಕ್ತಿ ಚಿತ್ರವನ್ನು ನೀಡುತ್ತಾನೆ: ''ಅವರು ಒಬ್ಬ ಅದ್ಭುತ ಪುರುಷರು. ಕೆಂಪು ಅಂಚಿನ ಪಂಚೆ ಉಡುತ್ತಾರೆ; ಷರಟು ತೊಟ್ಟುಕೊಳ್ಳುತ್ತಾರೆ. ಪಾಲಿಷ್ ಹಾಕಿದ ಸ್ಲಿಪ್ಪರ್ ಮೆಟ್ಟುತ್ತಾರೆ. ರಾಣಿ ರಾಸಮಣಿಯ ಕಾಳಿದೇವಾಲಯದ ಒಂದು ಕೊಠಡಿಯಲ್ಲಿ ವಾಸವಾಗಿದ್ದಾರೆ. ಅವರ ಕೊಠಡಿಯಲ್ಲಿ ಮಂಚ ಹಾಕಿದೆ. ಅದರ ಮೇಲೆ ಸುಪ್ಪತ್ತಿಗೆಯೆಲ್ಲ ಇದೆ. ಸೊಳ್ಳೆಪರದೆ ಕಟ್ಟಿದೆ. ಅದರ ಮೇಲೆ ಅವರು ಮಲಗುವುದು. ಸಂನ್ಯಾಸಿಯ ಯಾವ ಬಾಹ್ಯ ಚಿಹ್ನೆಯೂ ಕಾಣಬರುತ್ತಿಲ್ಲ. ಆದರೆ ಅವರಿಗೆ ಭಗವಂತನೊಬ್ಬನ ಹೊರತು ಬೇರೆ ಏನೂ ಗೊತ್ತಿಲ್ಲ. ಅಹರ್ನಿಶಿ ಭಗವಂತನ ಚಿಂತನೆಯಲ್ಲಿಯೇ ಕಾಲ ಕಳೆಯುತ್ತಾರೆ.''

ನಮ್ಮ ಶಾಸ್ತ್ರ ಹೇಳುತ್ತದೆ:

**ಚತುರ್ವಿಧಾ ಭಿಕ್ಷವಸ್ತೇ ಕುಟೀಚಕಬಹೂದಕೌ ।**
**ಹಂಸಃ ಪರಮಹಂಸಶ್ಚ ಯೋ ಯಃ ಪಶ್ಚಾತ್ ಸ ಉತ್ತಮಃ ॥**

''ಭಿಕ್ಷುಗಳಲ್ಲಿ ನಾಲ್ಕು ವಿಧ. ಕುಟೀಚಕ, ಬಹೂದಕ, ಹಂಸ ಮತ್ತು ಪರಮಹಂಸ. ಇವುಗಳಲ್ಲಿ ಮುಂದುಮುಂದಿನದು ಉತ್ತಮವಾದುದು.'' ಮೊದಲನೆಯ ಹಂತ ಕುಟೀಚಕ. ಈ ಸ್ಥಿತಿಯಲ್ಲಿ ಸಾಧಕನು ಒಂದೇ ಕಡೆ ತಂಗಿದ್ದು ತೀವ್ರ ತಪಸ್ಸು ಮಾಡಿ ತನ್ನ ಇಂದ್ರಿಯ ಮನಸ್ಸುಗಳನ್ನು ಗೆಲ್ಲುತ್ತಾನೆ. ಈ ರೀತಿ ಹೆಚ್ಚು ಶಕ್ತಿಯನ್ನು ಪಡೆದ ಮೇಲೆ ಅವನು ಬಹೂದಕನಾಗುತ್ತಾನೆ, ಅಂದರೆ ಅವನು ಪರಿವ್ರಾಜಕನಾಗಿ ಭಿಕ್ಷೆ ಬೇಡುತ್ತ ಎಲ್ಲೆಂದರಲ್ಲಿ ಮಲಗುತ್ತ ಊರಿಂದೂರಿಗೆ ಅಲೆದಾಡುತ್ತ ಸ್ವತಂತ್ರ ಜೀವನ ನಡೆಸುತ್ತಾನೆ. ಒಂದು ಕಂಬಳಿಹುಳು ತನ್ನ ಸುತ್ತ ಗೂಡನ್ನು ಕಟ್ಟಿಕೊಂಡು ಅದರೊಳಗೆ ಅದು ಬೆಳೆಯುತ್ತದೆ. ಕುಟೀಚಕನ ಸ್ಥಿತಿಯನ್ನು ಇದಕ್ಕೆ ಹೋಲಿಸಬಹುದು. ಸ್ವಲ್ಪ ಕಾಲದ ನಂತರ ಆ ಹುಳು ಗೂಡಿನಿಂದ ಹೊರಬಂದು ಚಿಟ್ಟೆಯಾಗಿ ಸ್ವತಂತ್ರವಾಗಿ ಹೂವಿನಿಂದ ಹೂವಿಗೆ ಅಲೆದಾಡುತ್ತದೆ. ಇದನ್ನು ಬಹೂದಕನ ಸ್ಥಿತಿಗೆ ಹೋಲಿಸಬಹುದು. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರೂ ಕೂಡ ಮೊದಲು ಬಾರಾನಗರ ಮಠದಲ್ಲಿ ವಾಸಿಸುತ್ತ ತೀವ್ರ ತಪಸ್ಸನ್ನಾಚರಿಸಿದರು. ಆನಂತರ ಪರಿವ್ರಾಜಕರಾಗಿ ಹಿಮಾಲಯ ಮುಂತಾದ ಸ್ಥಳಗಳಲ್ಲಿ ಓಡಾಡತೊಡಗಿದರು. ಹಂ ಎಂದರೆ ಅಹಂ (ನಾನು) ಎಂದು, ಸಃ ಎಂದರೆ ಪರಬ್ರಹ್ಮ. ನಾನೇ ಬ್ರಹ್ಮ ಎಂದು ಧ್ಯಾನಮಾಡುವವನು ಹಂಸ. ಈ ಜ್ಞಾನವು ಅನುಭವವಾದಾಗ ಅವನು ಪರಮಹಂಸ, ಹಂಸಕ್ಷೀರ ನ್ಯಾಯದಂತೆ ಬ್ರಹ್ಮವನ್ನು ಜಗತ್ತಿನಿಂದ ಪ್ರತ್ಯೇಕಿಸಿ ಆ ಪರಬ್ರಹ್ಮವನ್ನೇ ಅನು

ಭವಿಸುವ ಸಾಮರ್ಥ್ಯವುಳ್ಳವನು. ಅವನಿಗೆ ಯಾವ ವಿಧಿನಿಷೇಧಗಳೂ ಇರುವುದಿಲ್ಲ: 'ನಿಸ್ತ್ರೈಗುಣ್ಯೇ ಪಥಿ ವಿಚರತಃ ಕೋ ವಿಧಿಃ ಕೋ ನಿಷೇಧಃ' — ''ತ್ರಿಗುಣಗಳನ್ನೂ ಮೀರಿದ ಮಾರ್ಗದಲ್ಲಿ ಚಲಿಸುವವನಿಗೆ ವಿಧಿ ನಿಷೇಧಗಳೆಲ್ಲಿ!'' ಶ್ರೀರಾಮಕೃಷ್ಣರು ಆ ಸ್ಥಿತಿಯಲ್ಲಿದ್ದುದರಿಂದ ಅವರು ಪರಮಹಂಸರು. ದೇಹಬುದ್ಧಿ ಎಲ್ಲಿಯವರೆಗೆ ಇರುತ್ತದೆಯೊ ಅಲ್ಲಿಯವರೆಗೆ ಉಡುಗೆ-ತೊಡುಗೆ ಮುಂತಾದ ವಿಷಯದ ಕಡೆ ಗಮನವಿರುತ್ತದೆ, ಅವಕ್ಕೆ ಸಂಬಂಧಪಟ್ಟ ವಿಧಿನಿಷೇಧಗಳಿಗೂ ಇರುತ್ತವೆ. ಆದರೆ ಪರಮಹಂಸರು ಈ ವಿಧಿಗಳನ್ನೂ ಮೀರಿದವರು. ''ಅವರಿಗೆ ಭಗವಂತನೊಬ್ಬನ ಹೊರತು ಬೇರೆ ಏನೂ ಗೊತ್ತಿಲ್ಲ'' ಎಂದು ಶ್ರೀರಾಮಕೃಷ್ಣರ ಬಗ್ಗೆ ಒಂದು ವಿಶಿಷ್ಟವಾದ ಹೇಳಿಕೆಯನ್ನು 'ಮ' ಮುಂದಿಟ್ಟಿದ್ದಾರೆ. ಶ್ರೀರಾಮಕೃಷ್ಣರ ವಿಷಯದಲ್ಲಿ ಹೇಳಬೇಕೆಂದರೆ, ಎಲ್ಲವೂ ಭಗವದ್ರೂಪವಾಗಿರುವುದರಿಂದ ಅವರು ಏನು ಮಾತನಾಡಿದರೂ ಅದು ಭಗವದ್ವಿಷಯವೇ. ಸಾಮಾನ್ಯ ಜನರು ಭಗವಂತನ ಬಗ್ಗೆ ಮಾತನಾಡಿದರೂ ಅದು ಪ್ರಾಪಂಚಿಕವೇ – ಅವರ ಅಂತರಂಗದಲ್ಲಿ ಪ್ರಾಪಂಚಿಕತೆಯೇ ತುಂಬಿರುವುದರಿಂದ. ಇನ್ನೊಂದು ದೃಷ್ಟಿಯಿಂದ ಹೇಳುವುದಾದರೆ, ಎಲ್ಲ ಜ್ಞಾನವೂ ಆತ್ಮಜ್ಞಾನವೇ –ಆತ್ಮಚೈತನ್ಯದ ಬೆಳಕಿನಿಂದಲೇ ನಮಗೆ ಎಲ್ಲ ಜ್ಞಾನವೂ ಉಂಟಾಗುವಂತಹದು, ಎಲ್ಲ ಜ್ಞಾನವೂ ಆ ಆತ್ಮಜ್ಯೋತಿಯ ಪ್ರತಿಬಿಂಬ. ಆದ್ದರಿಂದ ಶ್ರೀರಾಮಕೃಷ್ಣರ ದೃಷ್ಟಿಯಲ್ಲಿ ಪ್ರಾಪಂಚಿಕ ಜ್ಞಾನ ಎಂಬುದಾವುದೂ ಇಲ್ಲ.

ಶ್ರೀರಾಮಕೃಷ್ಣರು ವಿದ್ಯಾಸಾಗರನ ಮನೆಗೆ ಹೋಗಿ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆಯೇ ವಿದ್ಯಾಸಾಗರ ಅವರನ್ನು ಎದುರುಗೊಳ್ಳಲು ಎದ್ದು ನಿಂತುಕೊಂಡನು. ಪರಮಹಂಸರು ಒಂದು ಬೆಂಚಿನ ಹತ್ತಿರ ಹೋಗಿ ಒಂದು ಕೈಯನ್ನು ಮೇಜಿನ ಮೇಲೆ ಊರಿ ನಿಂತುಕೊಂಡರು. ವಿದ್ಯಾಸಾಗರನು ಪೂರ್ವಪರಿಚಿತನೋ ಎಂಬಂತೆ ಆತನನ್ನು ಏಕದೃಷ್ಟಿಯಿಂದ ನೋಡುತ್ತ ಭಾವದಲ್ಲಿ ಕಿರುನಗೆ ನಗುತ್ತಿದ್ದಾರೆ. ಆ ಅವಸ್ಥೆಯಲ್ಲಿ ಕೆಲವು ನಿಮಿಷ ಹಾಗೆಯೇ ನಿಂತುಕೊಂಡರು. ಪ್ರಕೃತಿಸ್ಥರಾಗಲೋಸುಗ ಆಗಾಗ ಹೇಳುತ್ತಿದ್ದಾರೆ, ''ನೀರು ಕುಡಿಯಬೇಕು, ನೀರು ಕುಡಿಯಬೇಕು'' ಎಂಬುದಾಗಿ. ವಿದ್ಯಾಸಾಗರನ ಪಾಂಡಿತ್ಯ, ಔದಾರ್ಯ, ವಿವಿಧ ಪ್ರತಿಭೆ ಮುಂತಾದ ದೈವೀ ಗುಣಗಳನ್ನು ನೆನೆದುಕೊಳ್ಳುತ್ತಾ ಶ್ರೀರಾಮಕೃಷ್ಣರು ದೈವೀಭಾವದಲ್ಲಿ ತಲ್ಲೀನರಾಗಿದ್ದಿರಬೇಕು. ಇದು ಅವರ ಒಂದು ವೈಶಿಷ್ಟ್ಯ.

ಪರಮಹಂಸರು ನಗುನಗುತ್ತ ವಿದ್ಯಾಸಾಗರನೊಡನೆ ಮಾತನಾಡಲಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿಯೇ ಕೊಠಡಿ ಜನರಿಂದ ತುಂಬಿಬಿಟ್ಟಿತು. ಕೆಲವರು ಕುಳಿತಿದ್ದಾರೆ, ಕೆಲವರು ನಿಂತಿದ್ದಾರೆ.

ಶ್ರೀರಾಮಕೃಷ್ಣರು: ''ಆಹಾ! ಇಂದು ಸಾಗರಕ್ಕೆ ಒಂದು ಸೇರಿಬಿಟ್ಟಿದ್ದೇನೆ. ಇಲ್ಲಿಯವರೆಗೆ ಕಾಲುವೆ, ಜೌಗುಭೂಮಿ, ಅತಿ ಹೆಚ್ಚೆಂದರೆ ನದಿ, ಇವನ್ನು ನೋಡಿದ್ದೆ. ಆದರೆ ಇಂದು ಸಾಗರವೇ ನನ್ನ ಕಣ್ಣೆದುರಿಗಿದೆ.'' (ಎಲ್ಲರೂ ನಗುತ್ತಿದ್ದಾರೆ)

ವಿದ್ಯಾಸಾಗರ ನಗುತ್ತ: ''ಹಾಗಾದರೆ, ಇಲ್ಲಿಂದ ನೀವು ಸ್ವಲ್ಪ ಉಪ್ಪು ನೀರನ್ನು ತೆಗೆದುಕೊಂಡು ಹೋಗಬಹುದು.'' (ನಗು)

ಶ್ರೀರಾಮಕೃಷ್ಣರು : ''ಇಲ್ಲ, ಇಲ್ಲ, ಏಕೆ ಉಪ್ಪು ನೀರು ತಗೆದುಕೊಂಡು ಹೋಗಲಿ? ನೀನು ಅವಿದ್ಯೆಯ ಸಾಗರವೇ ನಲ್ಲ, ವಿದ್ಯೆಯ ಸಾಗರ. ನೀನು ಕ್ಷೀರಸಮುದ್ರ.'' (ಎಲ್ಲರೂ ನಗುತ್ತಿದ್ದಾರೆ.)

ವಿದ್ಯಾಸಾಗರ : ''ನೀವು ಬೇಕಾದರೆ ಹಾಗೆ ಹೇಳಬಹುದು.''

## ನಿಷ್ಕಾಮ ಕರ್ಮ

ಶ್ರೀರಾಮಕೃಷ್ಣರ ಚಮತ್ಕಾರಿಕ ಮಾತಿನ ಮುಂದೆ ವಿದ್ಯಾಸಾಗರನ ಮಾತು ಮೌನವಾಯಿತು. ಅವರೇ ಈಗ ಮಾತು ಮುಂದುವರಿಸುತ್ತಿದ್ದಾರೆ: ''ನಿನ್ನ ಕರ್ಮ ಸಾತ್ತ್ವಿಕ ಕರ್ಮ; ಸತ್ತ್ವಪ್ರಧಾನ ರಾಜಸಿಕ ಕರ್ಮ. ಸತ್ತ್ವಗುಣದಿಂದ ದಯೆ ಉಂಟಾಗುತ್ತದೆ. ದಯಾಪ್ರೇರಿತ ಕರ್ಮಗಳು ರಾಜಸಿಕವೇನೋ ನಿಜ. ಆದರೆ ಅವುಗಳಲ್ಲಿನ ರಜಸ್ಸು ಸತ್ತ್ವಪ್ರಧಾನ ರಜಸ್ಸು. ಅದರಿಂದ ಯಾವ ತೊಂದರೆಯೂ ಬಾರದು. ಶುಕದೇವಾದಿಗಳು ಲೋಕಶಿಕ್ಷಣಕ್ಕಾಗಿ, ಭಗವದ್ವಿಷಯವನ್ನು ತಿಳಿಸುವುದಕ್ಕಾಗಿ ದಯೆ ಇಟ್ಟುಕೊಂಡಿದ್ದರು. ನೀನು ವಿದ್ಯಾದಾನ, ಅನ್ನದಾನ ಮಾಡುತ್ತಿದ್ದೀಯ. ನಿಷ್ಕಾಮಭಾವನೆಯಿಂದ ಮಾಡಿದರೆ ಇವುಗಳಿಂದಲೂ ಭಗವಂತನ ಸಾಕ್ಷಾತ್ಕಾರ ದೊರೆಯುತ್ತದೆ. ಕೆಲವರು ಇದನ್ನು ಕೀರ್ತಿಗಾಗಿ, ಪುಣ್ಯಕ್ಕಾಗಿ ಮಾಡುತ್ತಾರೆ. ಅವರದು ನಿಷ್ಕಾಮಕರ್ಮ ಅಲ್ಲವೇ ಅಲ್ಲ.''

ವಿದ್ಯಾಸಾಗರನ ಬಗ್ಗೆ ಶ್ರೀರಾಮಕೃಷ್ಣರ ಪ್ರಶಂಸಾತ್ಮಕ ಮಾತುಗಳು ಕೆಳಗಿನ ಸುಭಾಷಿತ ಶ್ಲೋಕವನ್ನು ನೆನಪಿಗೆ ತರುತ್ತವೆ:

**ಸದಯಂ ಹೃದಯಂ ಯಸ್ಯ ಭಾಷಿತಂ ಸತ್ಯಭೂಷಿತಮ್ ।**
**ಕಾಯಃ ಪರಹಿತೋಪಾಯಃ ಕಲಿಃ ಕುರ್ವೀತ ತಸ್ಯ ಕಿಮ್ ॥**

''ಯಾರ ಹೃದಯವು ದಯಾಪೂರ್ಣವಾಗಿದೆಯೋ, ಯಾರ ಮಾತು ಸತ್ಯದಿಂದ ಅಲಂಕೃತವಾಗಿದೆಯೊ, ಹಾಗೇ ಯಾರ ದೇಹವು ಇತರರ ಹಿತವನ್ನು ಸಾಧಿಸುವ ಉಪಕರಣವಾಗಿದೆಯೋ ಅವನಿಗೆ ಕಲಿಯೂ ಏನು ತಾನೆ ಮಾಡಬಲ್ಲದು?''

ಶ್ರೀರಾಮಕೃಷ್ಣರು ಕರ್ಮದ ಬಗ್ಗೆ ಇಲ್ಲಿ ಒಂದು ವಿಶಿಷ್ಟವಾದ ವಿವರಣೆಯನ್ನು ನೀಡುತ್ತಿದ್ದಾರೆ. ಕರ್ಮ ಸ್ವಾಭಾವಿಕವಾಗಿ ರಜೋಗುಣದಿಂದ ಉಂಟಾಗುವಂತಹುದು. ಆದರೆ ದಯೆ ಮುಂತಾದ ಸದ್ಭಾವನೆಗಳಿಂದ ಅದು ಪ್ರೇರಿತವಾಗಿದ್ದರೆ ಆಗ ಅದು ಸತ್ತ್ವಪ್ರಧಾನ ಕರ್ಮವಾಗುತ್ತದೆ, ಸತ್ಕರ್ಮವಾಗುತ್ತದೆ. ಹೆಸರು, ಕೀರ್ತಿ, ಸ್ವಪ್ರತಿಷ್ಠೆ ಇವುಗಳಿಂದ ಪ್ರೇರಿತವಾಗಿದ್ದರೆ ಅದು ಮತ್ತಷ್ಟು ರಾಜಸಿಕವಾಗುತ್ತದೆ. ಆಗ ಅದು ಸತ್ಕರ್ಮವಾದರೂ ಸಕಾಮ ಕರ್ಮವಾಗುತ್ತದೆ. ದ್ವೇಷ, ಅಸೂಯೆ, ಮುಂತಾದ ದುರ್ಭಾವಗಳಿಂದ ಪ್ರೇರಿತವಾಗಿದ್ದರೆ, ದುಷ್ಕರ್ಮವಾಗುತ್ತದೆ, ನಿಷಿದ್ಧಕರ್ಮವಾಗುತ್ತದೆ. ಕರ್ಮವು ತಾನೇ ತಾನಾಗಿ ತಟಸ್ಥವಾದುದು —

ಒಳಿತೂ ಅಲ್ಲ, ಕೆಡುಕೂ ಅಲ್ಲ. ಅದರ ಹಿಂದಿರುವ ಭಾವಕ್ಕನು ಗುಣವಾಗಿ ಅದು ಸತ್ಕರ್ಮವೋ ದುಷ್ಕರ್ಮವೋ; ಸಕಾಮವೋ, ನಿಷ್ಕಾಮವೋ ಆಗುತ್ತದೆ.

ಶ್ರೀರಾಮಕೃಷ್ಣರು ಹೇಳುತ್ತಾರೆ, ನಿಷ್ಕಾಮಕರ್ಮದಿಂದಲೂ ಭಗವಂತನ ಸಾಕ್ಷಾತ್ಕಾರ ಉಂಟಾಗುತ್ತದೆ ಎಂದು. ಎಲ್ಲ ಕರ್ಮವೂ – ನಿಷ್ಕಾಮಕರ್ಮವೂ ಕೂಡ–ಮಾಯಾ ಪ್ರಪಂಚಕ್ಕೇ ಸೇರಿದುದಾದರೂ ನಿಷ್ಕಾಮಕರ್ಮವು–ಆಧ್ಯಾತ್ಮಿಕ ಸಾಧನೆ ಮುಂತಾದವುಗಳು–ಮಾಯಾಪ್ರಪಂಚವನ್ನು ದಾಟಿಹೋಗಲು ಸಹಾಯ ಮಾಡುತ್ತದೆ, ನೀರಿನ ಮೂಲಕವೇ ಈಜಿಹೋಗಿ ನದಿಯನ್ನು ದಾಟುವಂತೆ. ಇಲ್ಲಿ 'ಪಂಚದಶಿ'ಯ ಒಂದು ಶ್ಲೋಕ ನೆನಪಿಗೆ ಬರುತ್ತದೆ :

**ಜೀವದ್ವೈತಂ ತು ಶಾಸ್ತ್ರೀಯಮಶಾಸ್ತ್ರೀಯಮಿತಿ ದ್ವಿಧಾ ।**
**ಉಪಾದೀತ ಶಾಸ್ತ್ರೀಯಮಾತತ್ತ್ವಸ್ಯಾವಬೋಧನಾತ್ ॥** *(೪.೪೩)*

''ಜೀವಿಯಿಂದ ಸೃಷ್ಟಿಯಾಗಿರುವ ಈ ದ್ವೈತ ಪ್ರಪಂಚವು ಎರಡು ವಿಧ: ಒಂದು ಶಾಸ್ತ್ರಸಮ್ಮತವಾದುದು, ಇನ್ನೊಂದು ಶಾಸ್ತ್ರಕ್ಕೆ ವಿರುದ್ಧವಾದುದು. ತತ್ತ್ವಜ್ಞಾನವು ಉಂಟಾಗುವವರೆಗೂ ಶಾಸ್ತ್ರೀಯವಾದುದನ್ನು ಆಶ್ರಯಿಸಿಕೊಂಡಿರಬೇಕು.''

## ಬರಿಯ ಪಾಂಡಿತ್ಯ ಯಾತಕ್ಕೂ ಬಾರದು

ಶ್ರೀರಾಮಕೃಷ್ಣರು ಮಾತು ಮುಂದುವರಿಸುತ್ತಾರೆ. ''ನೀನು ಸಾಮಾನ್ಯ ಪಂಡಿತರ ಗುಂಪಿಗೆ ಸೇರಿದವನಲ್ಲ. ಬರಿಯ ಪಂಡಿತ ರೋಗ ಹಿಡಿದ ಹಣ್ಣಿನ ಹಾಗೆ. ಕಾಯಿಗೆ ಕಾಯೂ ಅಲ್ಲ, ಹಣ್ಣಿಗೆ ಹಣ್ಣೂ ಅಲ್ಲ–ಎಡಬಿಡಂಗಿ. ರಣಹದ್ದು ಬಹಳ ಎತ್ತರಕ್ಕೇನೋ ಹಾರಿಹೋಗುತ್ತದೆ. ಆದರೆ ಅದರ ದೃಷ್ಟಿಮಾತ್ರ ಸತ್ತ ಪ್ರಾಣಿಗಳ ಕಡೆ. ಬರಿಯ ಪಂಡಿತರು ಹೆಸರಿಗೇನೋ ಪಂಡಿತರು. ಆದರೆ ಕಾಮಕಾಂಚನಾಸಕ್ತರು. ರಣಹದ್ದುಗಳ ಹಾಗೆ ಕೊಳೆತು ನಾರುವ ಮಾಂಸಕ್ಕಾಗಿ ಹುಡುಕುತ್ತಾರೆ. ಆಸಕ್ತಿ ಅವಿದ್ಯಾಸಂಸಾರಕ್ಕೆ ಸೇರಿದ್ದು. ದಯೆ, ಭಕ್ತಿ, ವೈರಾಗ್ಯ ಇವು ವಿದ್ಯೆಯ ಐಶ್ವರ್ಯ.''

ಶ್ರೀರಾಮಕೃಷ್ಣರ ಮಾತಿನ ಆಧಾರದ ಮೇಲೆ ಪಂಡಿತರನ್ನು ಮೂರು ಬಗೆಯಾಗಿ ವಿಂಗಡಿಸಬಹುದು: ಪುಸ್ತಕ ಪಂಡಿತ, ವಿಚಾರ ಪಂಡಿತ, ಮತ್ತು ಅನುಭವಪಂಡಿತ. ಪುಸ್ತಕ ಪಂಡಿತನು ಅನೇಕ ಗ್ರಂಥಗಳನ್ನು ಓದಿ ಅಪಾರ ಜ್ಞಾನವನ್ನು ಪಡೆದಿರುತ್ತಾನೆ. ಆದರೆ ಅವನ ಜ್ಞಾನವು ಪುಸ್ತಕಗಳಿಗೆ ಮಾತ್ರ ಸೀಮಿತವಾಗಿರುತ್ತದೆ. ವಿಚಾರ ಪಂಡಿತನಾದರೋ ಪುಸ್ತಕಗಳನ್ನೂ ಮೀರಿ ಆಲೋಚನೆ ಮಾಡಬಲ್ಲ. ಸ್ವತಂತ್ರವಾಗಿ ಆಲೋಚಿಸುತ್ತ ವಿಚಾರಾಕಾಶದಲ್ಲಿ ಅತಿ ಎತ್ತರಕ್ಕೆ ಹಾರಬಲ್ಲ. ಆದರೆ ಅವನ ಗಮನವೆಲ್ಲ, ಶ್ರೀರಾಮಕೃಷ್ಣರು ಹೇಳುವಂತೆ, ಕಾಮಕಾಂಚನದ ಕಡೆಗೇ ಇರುತ್ತದೆ. ಆದರೆ ಅನುಭವ ಪಂಡಿತನ ವಿಚಾರವೇ ಬೇರೆ. ಅವನು ಪುಸ್ತಕ ಜ್ಞಾನವನ್ನೂ ಪಡೆದಿರುತ್ತಾನೆ, ವಿಚಾರವಂತನೂ ಆಗಿರುತ್ತಾನೆ, ಮತ್ತು ಸಮೃದ್ಧ ಅನುಭವದಿಂದ ಶೋಭಿಸುತ್ತಿರುತ್ತಾನೆ. ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ ಮುಂತಾದವರು ಇದಕ್ಕೆ ಜ್ವಲಂತ ಉದಾಹರಣೆಗಳು.

ಇಬ್ಬರು ಪಂಡಿತರು ಶ್ರಾದ್ಧದೂಟವನ್ನು ಮುಗಿಸಿ ಮನೆಗೆ ಹಿಂತಿರುಗುತ್ತಿದ್ದರು. ಯಾವುದೋ ಜಟಿಲವಾದ ತಾತ್ತ್ವಿಕ ಸಮಸ್ಯೆಯ ಕುರಿತು ದಾರಿಯಲ್ಲಿ ಬಿಸಿಬಿಸಿ ಚರ್ಚೆ ಪ್ರಾರಂಭವಾಯಿತು. ಕತ್ತಲೆಯಾದದ್ದೇ ತಿಳಿಯಲಿಲ್ಲ. ಕಾಡಿನ ಪ್ರದೇಶ. ಇವರ ಬಿಸಿಬಿಸಿ ಚರ್ಚೆಯಿಂದ ಆಕರ್ಷಕವಾದ ಒಂದು ಹೆಬ್ಬುಲಿ ಎದುರುಗಡೆಯಿಂದ ಬಂದೇಬಿಟ್ಟಿತು. ಪಂಡಿತರು ತಮ್ಮ ಭಾರವಾದ ಹೊಟ್ಟೆಯನ್ನು ಹೊತ್ತುಕೊಂಡು ಮರವನ್ನೇರಿದರು. ಆದರೆ ಆ ಹುಲಿ ಇವರು ಕೆಳಗಿಳಿಯುವುದನ್ನೇ ಕಾಯುತ್ತ ಮರದ ಕೆಳಗೇ ನಿಂತುಕೊಂಡಿತ್ತು. ಪಂಡಿತನೊಬ್ಬನಿಗೆ ಒಂದು ಹೊಸ ವಿಚಾರ ತಲೆಗೆ ಹೊಳೆಯಿತು. ಇನ್ನೊಬ್ಬನನ್ನು ಕೆಳಗೆ ತಳ್ಳಿಬಿಟ್ಟರೆ, ಹುಲಿಯು ಅವನನ್ನು ಎಳೆದುಕೊಂಡು ಹೋಗುತ್ತದೆ, ತಾನು ಸುರಕ್ಷಿತವಾಗಿ ಮನೆ ತಲುಪಬಹುದು ಎಂದು. ದುರದೃಷ್ಟದಿಂದ ಒಂದೇ ಆಲೋಚನೆ ಇಬ್ಬರ ಮನಸ್ಸಿಗೂ ಹೊಳೆಯಬೇಕೇ! ಪರಿಣಾಮವಾಗಿ ಇಬ್ಬರೂ ಒಬ್ಬರನ್ನೊಬ್ಬರು ತಳ್ಳತೊಡಗಿದ್ದರಿಂದ ಇಬ್ಬರೂ ಕೆಳಗೆ ಬಿದ್ದು ಹುಲಿಯ ಬಾಯಿಗೆ ತುತ್ತಾದರು. ಶುಷ್ಕ ಪಾಂಡಿತ್ಯದಿಂದ ಮನುಷ್ಯನ ಮನಸ್ಸು ಬದಲಾಗುವುದಿಲ್ಲ.

## ವಿದ್ಯಾಮಾಯೆ ಮತ್ತು ಅವಿದ್ಯಾಮಾಯೆ

ಈಗ ಪರಮಹಂಸರ ಮಾತು ಬ್ರಹ್ಮಜ್ಞಾನದ ಸಂಬಂಧವಾಗಿ ಆರಂಭವಾಯಿತು. ''ಈ ಜಗತ್ತಿನಲ್ಲಿ ವಿದ್ಯೆ ಮಾಯೆ, ಅವಿದ್ಯೆ ಮಾಯೆ ಎರಡೂ ಇವೆ. ಜ್ಞಾನಭಕ್ತಿಯೂ ಇದೆ, ಕಾಮ ಕಾಂಚನವೂ ಇದೆ. ಸತ್ ಕೂಡ ಇದೆ, ಅಸತ್ ಕೂಡ ಇದೆ. ಒಳ್ಳೆಯದೂ ಇದೆ ಕೆಟ್ಟದ್ದೂ ಇದೆ. ಆದರೆ ಬ್ರಹ್ಮ ಮಾತ್ರ ನಿರ್ಲಿಪ್ತ. ಒಳ್ಳೆಯದು ಕೆಟ್ಟದ್ದು, ಸತ್ ಅಸತ್ತು ಇವು ಜೀವಿಗಳ ಪಕ್ಷಕ್ಕೆ ಮಾತ್ರ. ಆದರೆ ಬ್ರಹ್ಮನಿಗೆ ಇವುಗಳಿಂದ ಏನೂ ಆಗದು.''

ಶ್ರೀರಾಮಕೃಷ್ಣರು ವಿದ್ಯಾಮಾಯೆ ಮತ್ತು ಅವಿದ್ಯಾಮಾಯೆ – ಇವುಗಳ ಕುರಿತಾಗಿ ಅನೇಕ ಕಡೆಗಳಲ್ಲಿ ಹೇಳಿದ್ದಾರೆ. ವಿದ್ಯಾಮಾಯೆಯು ಭಗವಂತನನ್ನು ಪಡೆಯಲು ಸಹಾಯ ಮಾಡುತ್ತದೆ, ಅವಿದ್ಯಾ ಮಾಯೆಯು ವ್ಯಕ್ತಿಯನ್ನು ಭಗವಂತನಿಂದ ವಿಮುಖಗೊಳಿಸುತ್ತದೆ. ಇದೇ ವಿಷಯವು ವಿದ್ಯಾರಣ್ಯರ 'ಪಂಚದಶಿ'ಯಲ್ಲಿಯೂ ಬರುತ್ತದೆ. ಅಲ್ಲಿ ಈ ಎರಡು ಮಾಯೆಯನ್ನು ಕಟುವಾಗಿ ಸಂವಾದಿಭ್ರಮೆ ಮತ್ತು ವಿಸಂವಾದಿ ಭ್ರಮೆ ಎಂದು ಕರೆಯಲಾಗಿದೆ *(೯.೨)*:

**ಮಣಿಪ್ರದೀಪ ಪ್ರಭಯೋರ್ಮಣಿಬುದ್ಧ್ಯಾಽಭಿಧಾವತೋಃ ।**
**ಮಿಥ್ಯಾಜ್ಞಾನವಿಶೇಷೋಽಪಿ ವಿಶೇಷೋಽರ್ಥಕ್ರಿಯಾಂ ಪ್ರತಿ ॥**

''ಒಬ್ಬನು ಮಣಿಯ ಬೆಳಕನ್ನು ದೂರದಿಂದ ನೋಡಿ ಮಣಿಯೆಂದು ತಿಳಿದು ಅದರ ಕಡೆ ಓಡುತ್ತಾನೆ. ಇನ್ನೊಬ್ಬನು ದೀಪದ

ಬೆಳಕನ್ನು ನೋಡಿ ಮಣಿಯೆಂದು ತಿಳಿದು ಓಡುತ್ತಾನೆ. ಎರಡೂ ಸುಳ್ಳು ತಿಳುವಳಿಕೆಯಾಗಿದ್ದರೂ ಇಷ್ಟಾರ್ಥ ಲಾಭದಲ್ಲಿ ಭೇದ ವಿರುತ್ತದೆ.'' ಒಬ್ಬನಿಗೆ ಮಣಿಯು ಸಿಗುತ್ತದೆ, ಇನ್ನೊಬ್ಬನಿಗೆ ಸಿಗು ವುದಿಲ್ಲ.

**ದೀಪಪ್ರಭಾಮಣಿಭ್ರಾಂತಿರ್ವಿಸಂವಾದಿಭ್ರಮಃ ಸ್ಮೃತಃ ।**
**ಮಣಿಪ್ರಭಾಮಣಿಭ್ರಾಂತಿಃ ಸಂವಾದಿಭ್ರಮ ಉಚ್ಯತೇ॥** *(೯.೬)*

''ದೀಪದ ಬೆಳಕನ್ನು ನೋಡಿ ತಂದುಕೊಂಡ ಮಣಿಯೆಂಬ ಭ್ರಾಂತಿಯು ವಿಸಂವಾದಿಭ್ರಮೆಯೆನಿಸುತ್ತದೆ. ಮಣಿಯ ಬೆಳ ಕನ್ನು ನೋಡಿ ತಂದುಕೊಂಡ ಮಣಿಯೆಂಬ ಭ್ರಾಂತಿಯು ಸಂವಾದಿಭ್ರಮೆಯೆನಿಸುತ್ತದೆ.''

## ಬ್ರಹ್ಮ ನಿರ್ಲಿಪ್ತ

ಬ್ರಹ್ಮ ನಿರ್ಲಿಪ್ತ ಎಂಬುದಕ್ಕೆ ಶ್ರೀರಾಮಕೃಷ್ಣರು ಇನ್ನೊಂದು ಉದಾಹರಣೆಯನ್ನು ನೀಡುತ್ತಾರೆ. ''ಒಬ್ಬ ದೀಪದ ಬೆಳಕಿನಲ್ಲಿ ಭಾಗವತ ಓದುತ್ತಿರಬಹುದು, ಇನ್ನೊಬ್ಬ ಅದೇ ಬೆಳಕಿನಲ್ಲಿ ಸುಳ್ಳು ಪತ್ರ ಬರೆಯುತ್ತಿರಬಹುದು. ಆದರೆ ದೀಪ ಮಾತ್ರ ನಿರ್ಲಿಪ್ತ ವಾದದ್ದು. ಸೂರ್ಯ ತನ್ನ ಬೆಳಕನ್ನು ಒಳ್ಳೆಯದರ ಮೇಲೂ ಬಿಡುತ್ತಾನೆ, ಕೆಟ್ಟದರ ಮೇಲೂ ಬಿಡುತ್ತಾನೆ.

''ನೀನು ಕೇಳಬಹುದು, 'ಹಾಗಾದರೆ ದುಃಖ, ಪಾಪ, ಅಶಾಂತಿ ಇವುಗಳಿಗೆಲ್ಲ ಸಮಂಜಸ ಉತ್ತರ ಎಲ್ಲಿ?' ಎಂದು. ಇವೆಲ್ಲ ಜೀವಕ್ಕೆ ಸಂಬಂಧಪಟ್ಟವು ಎಂಬದೇ ಉತ್ತರ. ಬ್ರಹ್ಮ ಇವುಗಳಿಂದ ನಿರ್ಲಿಪ್ತ. ಹಾವಿನಲ್ಲಿ ವಿಷವಿದೆ. ಅದು ಪರರನ್ನು ಕಡಿದಾಗ ಮಾತ್ರ ಅವರು ಸತ್ತುಹೋಗುತ್ತಾರೆ. ಆದರೆ ಹಾವಿಗೆ ಮಾತ್ರ ಅದರಿಂದ ಏನೂ ಆಗದು.''

ಶ್ರೀರಾಮಕೃಷ್ಣರ ಈ ಮೇಲಿನ ಮಾತು ಭಗವದ್ಗೀತೆಯಲ್ಲಿ ಹೇಳಿದ ಶ್ರೀಕೃಷ್ಣನ ಮಾತನ್ನು ನೆನಪಿಸುತ್ತದೆ:

**ನ ಕರ್ತೃತ್ವಂ ನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ ।**
**ನ ಕರ್ಮಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ॥**

*(೫.೧೪)*

''ಆತ್ಮನು ಜನರಿಗೆ ಕರ್ತೃತ್ವವನ್ನಾಗಲೀ, ಕರ್ಮಗಳನ್ನಾಗಲೀ ಕರ್ಮಫಲದ ಸಂಬಂಧವನ್ನಾಗಲೀ ಸೃಷ್ಟಿಸುವುದಿಲ್ಲ. ಆದರೆ ಪ್ರಕೃತಿ ಸಂಪರ್ಕದಿಂದುಂಟಾದ ಅವರವರ ಸ್ವಭಾವವೇ ಕೆಲಸ ಮಾಡುವುದು.'' ವೈಷಮ್ಯ ಮತ್ತು ನೈರ್ಘೃಣ್ಯ ಎಂಬ ಎರಡು ಭಾವನೆಗಳ ಕುರಿತಾಗಿ ನಮ್ಮ ಶಾಸ್ತ್ರದಲ್ಲಿ ಬಹಳಷ್ಟು ಚರ್ಚೆ ನಡೆದಿದೆ. ವೈಷಮ್ಯ ಎಂದರೆ ಪಕ್ಷಪಾತ, ನೈರ್ಘೃಣ್ಯ ಎಂದರೆ ಕನಿಕರವಿಲ್ಲದಿರುವಿಕೆ. ಈ ಪ್ರಪಂಚದಲ್ಲಿ ಸುಖ-ದುಃಖ, ಪಾಪ-ಪುಣ್ಯ, ಒಳಿತು-ಕೆಡುಕು ಮುಂತಾದ ಅನೇಕ ದ್ವಂದ್ವಗಳಿವೆ. ದಯಾಮಯನೂ, ಸರ್ವಕಲ್ಯಾಣಗುಣಭೂಷಿತನೂ ಆದ ಭಗವಂತನೇ ಸೃಷ್ಟಿಕರ್ತನಾಗಿದ್ದರೆ ಪ್ರಪಂಚದಲ್ಲಿ ಏಕೆ ಇಷ್ಟೊಂದು ದುಃಖ, ಇಷ್ಟೊಂದು ಕೆಡುಕುಗಳು? ಇವಕ್ಕೆಲ್ಲ ಭಗವಂತನೇ ಕಾರ ಣವೇ, ಅಥವಾ ಜೀವಿಗಳೇ ಕಾರಣವೆ? ಜಗತ್ತಿನ ಮೂಲ ಕಾರಣ ಅವನೇ ಆಗಿರುವುದರಿಂದ ಅವನ ಮೇಲೆ ವೈಷಮ್ಯ, ನೈರ್ಘೃಣ್ಯ ದೋಷಗಳನ್ನು ಆರೋಪಿಸಬೇಕಾಗುತ್ತದೆ. ಆಗ ಭಗವಂತನ ನಿಜಸ್ವರೂಪಕ್ಕೇ ಚ್ಯುತಿಯುಟಾಗುತ್ತದೆ. ಬಹಳ ಕಾಲದಿಂದ ಈ ಚರ್ಚೆ ನಡೆದುಕೊಂಡು ಬಂದಿದೆ. ಪಾಶ್ಚಾತ್ಯ ತತ್ತ್ವಶಾಸ್ತ್ರ ದಲ್ಲಿಯೂ ಈ ಕೆಡುಕಿನ ಸಮಸ್ಯೆ (problem of evil) ದೊಡ್ಡ ಚರ್ಚೆಯ ವಿಷಯವಾಗಿದೆ. ಇಲ್ಲಿ ಇದನ್ನು ಚರ್ಚಿಸುವ ಅಗತ್ಯವಿಲ್ಲ, ಈ ಚರ್ಚೆಯನ್ನು ತತ್ತ್ವಜ್ಞಾನಿಗಳಿಗೆ ಬಿಟ್ಟು ಬಿಡೋಣ. ಈ ವಿಷಯದಲ್ಲಿ ಶ್ರೀರಾಮಕೃಷ್ಣರ ಅಭಿಪ್ರಾಯ ವಂತೂ ಮೇಲೆ ಸ್ಪಷ್ಟವಾಗಿಯೇ ಇದೆ. ಈ ವಿಷಯಕ್ಕೆ ಸಂಬಂಧಿ ಸಿದ ಒಂದು ಘಟನೆಯನ್ನು ಇಲ್ಲಿ ಪ್ರಸ್ತಾಪಿಸುವುದು ಉಚಿತ ವಾಗಿದೆ.

*(ಮುಂದುವರಿಯುವುದು)*

## ಸ್ವಾಮಿ ವಿವೇಕಾನಂದರ ಸತ್ಯನಿಷ್ಠೆ

ಒಂದು ಸಲ ಸ್ವಾಮಿ ವಿವೇಕಾನಂದರು (ಆಗ 'ನರೇಂದ್ರ') ದಕ್ಷಿಣೇಶ್ವರದಿಂದ ಹೊರಡುವಾಗ ಶ್ರೀರಾಮಕೃಷ್ಣರಿಗೆ ಹೇಳಿದರು: ತಾನು ಮುಂದಿನ ಬುಧವಾರ ಬರುವುದಾಗಿ. ''ಎಷ್ಟು ಗಂಟೆಗೆ?'' ಎಂದು ಕೇಳಿದರು ಶ್ರೀರಾಮಕೃಷ್ಣರು. ''ಮೂರು ಗಂಟೆಗೆ'' ಎಂದರು ಸ್ವಾಮೀಜಿ. ಮುಂದಿನ ಬುಧವಾರದಂದು ಅವರು ಎರಡು ಗಂಟೆಗೇ ದಕ್ಷಿಣೇಶ್ವರಕ್ಕೆ ಬಂದಿದ್ದರು; ಹೊರಗೆ ಗೇಟಿನ ಬಳಿ ಕಾದು ಕುಳಿತಿದ್ದರು. ಅವರು ಮೂರು ಗಂಟೆಗೆ ಶ್ರೀರಾಮಕೃಷ್ಣರನ್ನು ಭೇಟಿಯಾಗುವುದಾಗಿ ಹೇಳಿದ್ದರು, ಅದಕ್ಕಾಗಿ ಅವರು ಹೊರಗೆ ಕಾಯುತ್ತ ಕುಳಿತರು.

ಆಗ ಶ್ರೀರಾಮಕೃಷ್ಣರು ತಮ್ಮ ಕೋಣೆಯಲ್ಲಿ ಭಕ್ತರೊಂದಿಗೆ ಮಾತನಾಡುತ್ತಿದ್ದರು. ಸ್ವಾಮೀಜಿ ಬಂದ ವಿಷಯವನ್ನು ಅವರಿಗೆ ಯಾರೋ ತಿಳಿಸಿದರು. ಕೂಡಲೇ ಅವರು ಮಾತು ನಿಲ್ಲಿಸಿ, ಗೇಟಿನತ್ತ ಹೋದರು. ''ಓ, ನರೇನ್, ಯಾವಾಗ ಬಂದೆ? ಇಲ್ಲೇಕೆ ನಿಂತಿ ದ್ದೀಯೆ, ಏನಾಯಿತು?'' ಎಂದು ಅವರು ಕೇಳಿದರು. ಸ್ವಾಮೀಜಿ ಹೇಳಿದರು: ''ಮೂರು ಗಂಟೆಗೆ ಬರುತ್ತೇನೆ ಅಂತ ನಿಮಗೆ ಮಾತು ಕೊಟ್ಟಿದ್ದೆ. ಆದರೆ ನಾನು ಬಹಳ ಬೇಗ ಮನೆಯಿಂದ ಹೊರಟಿದ್ದೆ. ಆದರೆ ಇನ್ನೂ ಎರಡು ಗಂಟೆಯಾಗಿದೆ. ಆಡಿದ ಮಾತನ್ನು ಉಳಿಸು ವುದಕ್ಕಾಗಿ ನಾನು ಇಲ್ಲಿ ಕಾಯುತ್ತ ನಿಂತಿದ್ದೇನೆ.'' ಇದನ್ನು ಕೇಳಿ ಶ್ರೀರಾಮಕೃಷ್ಣರಿಗೆ ತುಂಬಾ ಆನಂದವಾಯಿತು. ಅವರು ಅಲ್ಲೇ ತಮ್ಮ ಶಿಷ್ಯನೊಂದಿಗೆ ಸ್ವಲ್ಪ ಹೊತ್ತು ಮಾತನಾಡುತ್ತ ನಿಂತರು. ಮೂರು ಗಂಟೆಗೆ ಸರಿಯಾಗಿ ಸ್ವಾಮೀಜಿ ಶ್ರೀರಾಮಕೃಷ್ಣರ ಕೊಠಡಿಗೆ ಹೋದರು.

*ರಾಮಲಾಲ ಚಟ್ಟೋಪಾಧ್ಯಾಯನ ಸ್ಮೃತಿ, 'Ramakrishna As We Saw Him' ಗ್ರಂಥದಿಂದ, ಪು. ೫೨*